ಸಿಸಿ **1032/2021** ಪಿಡಬ್ಲ್ಯೂ **-1** - ನವೀನ

ಇಮಗೌಡನವರ

**(ದಿನಾಂಕಃ 18-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಂದುವರೆದ ಪಾಟಿ ಸವಾಲುಃ ಶ್ರೀ ಎ ಎಂ ವಿ ಆರೋಪಿ ಪರ ವಕೀಲರಿಂದ -**

**1.** ಆರೋಪಿಯು ಚೆಕ್ಕನ್ನು ದಿನಾಂಕ **26-3-2021** ರಂದು ನನ್ನ ತಂದೆ ಸಮಕ್ಷಮ ನನಗೆ ಕೊಟ್ಟರು. ನನ್ನ ತಂದೆ ಮತ್ತು ಆರೋಪಿಯನ್ನು ಹೊರತು ಪಡಿಸಿ ಬೇರೆ ಯಾರೂ ಅಲ್ಲಿ ಇರಲಿಲ್ಲ. ಸದರಿ ಚೆಕ್ ಅಟ ಪಾರ್ಟ ಚೆಕ್ ಇದ್ದು ಎಲ್ಲಿಬೇಕಾದರೂ ಪ್ರೆಜಂಟ ಮಾಡಬಹುದು ಎಂದರೆ ನಿಜ. ಸ್ಟೇಟ ಬ್ಯಾಂಕ ಆಫ್ ಇಂಡಿಯಾದ ಇಂಟರನೆಟ ಬ್ಯಾಂಕಿಂಗ ಫ್ಯಾಸಿಲಿಟಿ ಇದೆ ಎಂದರೆ ನಿಜ. ಆರೋಪಿಯಿ ಮೊಬೈಲ ತೆಗೆದುಕೊಂಡು ಅದರಲ್ಲಿ ಹಣ ಇತ್ತೊ ಇಲ್ಲವೊ ಎಂದು ನಾನು ಚೆಕ್ ಮಾಡಿರುವುದಿಲ್ಲ. ಯಾರ ಹೆಸರಿಗೆ ಅಕೌಂಟ ರಜಿಸ್ಟರ ಆಗಿರುತ್ತೊ ಮಿಸ್ ಕಾಲ ಮೂಲಕ ಬ್ಯಾಲನ್ಸ ತೋರಿಸುವಂತಹ ಸೌಲಭ್ಯ ಇದೆ ಎಂದರೆ ನಿಜ. ಚೆಕ್ ತೆಗೆದುಕೊಳ್ಳುವ ಮುಂಚೆ ಆರೋಪಿ ಕಡೆಯಿಂದ ಬ್ಯಾಲನ್ಸ ಇದೆಯೋ ಇಲ್ಲವೊ ಎಂಬ ಬಗ್ಗೆ ನಾನು ತಿಳಿದುಕೊಳ್ಳಲಿಲ್ಲ.

**2.** ನಿ.ಪಿ**-1** ರ ಚೆಕ್ಕ ಮೇಲೆ ಬರೆದಿದ್ದ ಕೈಬರಹ ನನ್ನದೇ ಇದೆ. ಅದರ ಮೇಲೆ ಇರುವಂತಹ ಡೇಟ ಸಹ ನಾನೇ ಬರೆದಿರುತ್ತೇನೆ. ಚೆಕ್ ಮೇಲೆ ಇರುವ ಆರೋಪಿಯ ಸಹಿ ಇರುವ ಇಂಕಿಗೂ ಹಾಗೂ ಬೇರೆ ಬರಹದ ಇಂಕಿಗೂ ವ್ಯತ್ಯಾಸ ಇದೆ ಎಂದರೆ ನಿಜ. ನಿ.ಪಿ**-1** ರ ಚೆಕ್ ಮೇಲೆ ಅಕೌಂಟ ಪೇಯಿ ಓನ್ಲಿ ಎಂದು ನಾನೇ ಬರೆದಿರುತ್ತೇನೆ. ಆರೊಪಿಯು ನನ್ನ ತಂದೆಗೆ ಭದ್ರತೆಗಾಗಿ ಕೊಟ್ಟಂತಹ ಚೆಕ್ಕನ್ನು ನಾನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೊಪಿಯ ನಡುವೆ ಯಾವುದೇ ಕೊಡು ತೆಗೆದುಕೊಳ್ಳುವ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ.

**3.** ನಿ.ಪಿ**-3** ರ ಲೀಗಲ ನೋಟಿಸನ್ನು ಕೊಡುವ ಮುಂಚೆ ಓದಿ ತಿಳಿದುಕೊಂಡಿರುತ್ತೇನೆ. ಆ ನೋಟಿಸನ್ನು ಬರೆಯಲು ನಾನು ಮತ್ತು ನನ್ನ ತಂದೆ ಒಟ್ಟಿಗೆ ಮಾಹಿತಿ ಕೊಟ್ಟಿರುತ್ತೇವೆ. ಇಂತಹದೇ ತಾರೀಖಿನಂದು ರೂ. **9,50,000/-** ಆರೋಪಿಗೆ ಕೊಟ್ಟಿದ್ದೇನೆ ಎಂದು ಲೀಗಲ

ನೋಟಿಸಿನಲ್ಲಿ ಬರೆದಿಲ್ಲ. ನಾನು ಆರೋಪಿಗೆ ಯಾವುದೇ ಹಣ ಕೊಡದೇ ಇರುವುದರಿಂದ ಅದನ್ನು ಉಲ್ಲೇಖ ಮಾಡಿಲ್ಲ ಎಂದರೆ ಸರಿಯಲ್ಲ. ನೋಟಿಸ ಮುಟ್ಟಿದ ಬಗ್ಗೆ ಎಕನಾಲಡ್ಜಮೆಂಟ ನಮ್ಮ ಲಾಯರ ಹತ್ತಿರ ಇರುತ್ತದೆ. ಆ ನೋಟಿಸು ಆರೋಪಿಗೆ ಜಾರಿ ಆಗಿಲ್ಲ ಎಂದರೆ ಸರಿಯಲ್ಲ.

**4.** ನನ್ನ ಕಂಪ್ಲೆಂಟನಲ್ಲಿಯೂ ಸಹ **9,50,000/-** ಇಂತಹದೇ ತಾರೀಖಿನಂದು ಇಂತಹವರ ಸಮಕ್ಷಮ ಕೊಟ್ಟಿದ್ದೇನೆ ಎಂಬ ಬಗ್ಗೆ ಉಲ್ಲೇಖ ಇಲ್ಲ ಎಂದರೆ ನಿಜ. ಆರೋಪಿಯು ದಿನಾಂಕ **26-3-2021** ರಂದು ಹಣ ಮರುಪಾವತಿ ಸಲುವಾಗಿ ನಿ.ಪಿ-1 ರ ಚೆಕ ಕೊಟ್ಟಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚೆಕ್ಕನ್ನು ಬಟವಡೆಗೆ ಹಾಕಿದಾಗ ಅದು ಫಂಡ್ಸ ಇನಸಫೀಸಿಯಂಟ ಎಂದು ಮರಳಿ ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ಭದ್ರತೆಗಾಗಿ ನನ್ನ ತಂದೆಗೆ ಕೊಟ್ಟಂತಹ ಚೆಕ್ಕನ್ನು ನಾನು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಗದಿತ ಅವಧಿಯಲ್ಲಿ ನಾನು ಈ ಪ್ರಕಣವನ್ನು ದಾಖಲ ಮಾಡಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ಕೋವಿಡ ಇತ್ತು , ಆ ಕಾರಣದಿಂದ ನಾವು ಸಾಕಷ್ಟು ಬಾರಿ ಕೋರ್ಟಿಗೆ ಬಂದು ವಾಪಸ ಹೋಗಿದ್ದೇನೆ ಎಂದು ಹೇಳುತ್ತಾರೆ. ಭಾರತದಾದ್ಯಂತ ಆನಲೈನ ಮೂಲಕ ಕೇಸ ಫೈಲ ಮಾಡಲು ಅವಕಾಶ ಇತ್ತು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನಾನು ಕೇಳುವಂತಹ ಹಣ ಕಾನೂನುಬದ್ದವಾಗಿ ಆರೋಪಿ ಕೊಡುವಂತಹ ಕಾನೂನುಬದ್ದ ಹಣ ಅಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಸೇರಿ ಆರೋಪಿಗೆ ಯಾವುದೋ ಒಂದು ರೀತಿ ತೊಂದರೆ ಕೊಡಬೇಕೆಂದು ಈ ಸುಳ್ಳು ದೂರು ದಾಖಲ ಮಾಡಿದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

**( ಆದಿತ್ಯ ಆರ್ ಕಲಾಲ್ )**
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**